# ಎಳೆಯ ಹೃದಯಗಳಿಗೆ ಏನಿದೇನಿದು ನೋವು...

**ಆನುವಂಶಿಕವಾಗಿ ಬಂದಿರುವ ಹೃದಯ ಸಮಸ್ಯೆಗಳಿಂದ ಮಕ್ಕಳಲ್ಲಿ ಹೃದಯ ವೈಫಲ್ಯ ಉಂಟಾಗುತ್ತದೆ. ಅಧಿಕ ರಕ್ತದೊತ್ತಡ, ತೀವ್ರ ಸ್ವರೂಪದ ರಕ್ತಹೀನತೆ ಮುಂತಾದ ಕಾರಣಗಳೂ ಮಕ್ಕಳ ಹೃದಯವನ್ನು ಹಿಂಡಿ ಹಿಪ್ಪೆ ಮಾಡುತ್ತವೆ.**

**■ ಡಾ. ಕೆ.ಬಿ. ರಂಗಸ್ವಾಮಿ**



ನಾನು ಸ್ನಾತಕೋತ್ತರ ವಿದ್ಯಾರ್ಥಿಯಾಗಿದ್ದಾಗ ಸ್ನಾತಕ ವಿದ್ಯಾರ್ಥಿಯೊಬ್ಬ ‘ಸರ್, ಹೃದಯಾಘಾತ ಮತ್ತು ಹೃದಯ ವೈಫಲ್ಯಕ್ಕಿರುವ ವ್ಯತ್ಯಾಸವೇನು?’ ಎಂದು ಕೇಳಿದ್ದ. ಸುಲಭವಾಗಿ ಅರ್ಥವಾಗುವಂತೆ ವಿವರಿಸಿ ಆತನ ಸಂದೇಹ ಬಗೆಹರಿಸಿದ್ದೆ. ಸಾಕಷ್ಟು ಜನಸಾಮಾನ್ಯರನ್ನೂ ಕಾಡುವ ಪ್ರಶ್ನೆಯಿದು. ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿರುವಂತೆ ಕಿರೀಟ ಧಮನಿಗಳಲ್ಲಿ ಅಡಚಣೆಯುಂಟಾಗಿ ಹೃದಯದ ಸ್ನಾಯುಗಳಿಗೆ ರಕ್ತದ ಸರಬರಾಜು ಸ್ಥಗಿತಗೊಂಡಾಗ ಹೃದಯಾಘಾತ ಉಂಟಾಗುತ್ತದೆ.

## ಹೃದಯ ವೈಫಲ್ಯ ಎಂದರೇನು?

ಹೃದಯವು ಒಂದು ಪಂಪ್‌ನಂತೆ ಕಾರ್ಯನಿರ್ವಹಿಸುತ್ತಾ ಶರೀರದ ಎಲ್ಲಾ ಜೀವಕೋಶಗಳಿಗೆ ನಿರಂತರವಾಗಿ ರಕ್ತ ಸರಬರಾಜು ಮಾಡುವ ಒಂದು ಪ್ರಮುಖ ಅಂಗ. ಯಾವುದೇ ಕಾರಣದಿಂದ ಇದರ ಕಾರ್ಯಕ್ಷಮತೆಯಲ್ಲಿ ಕುಂದುಂಟಾಗುವುದನ್ನು ಹೃದಯ ವೈಫಲ್ಯ ಎನ್ನಲಾಗುತ್ತದೆ. ಅಶುದ್ಧ ರಕ್ತವನ್ನು ತನ್ನೊಳಗೆ ಸ್ವೀಕರಿಸುವ ಪ್ರಕ್ರಿಯೆಯಲ್ಲಿ ವ್ಯತ್ಯಯವುಂಟಾದರೆ